ನಿಮ್ಮೊಡನೆ

# ವೈದ್ಯರ ಮೇಲೆ ಅಪನಂಬಿಕೆ ಸರಿಯೆ?

ವೈದ್ಯಶಿಕ್ಷಣದ ಖಾಸಗೀಕರಣದಿಂದಾಗಿ ವೈದ್ಯರ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎನ್ನುವುದು ನಿಜ. ಆದರೆ ಗುಣಮಟ್ಟ ಏರಿಕೆಯಾಗಿಲ್ಲ ಎನ್ನುವುದನ್ನೂ ಗಮನಿಸಬೇಕು. ಭ್ರಷ್ಟಾಚಾರ ಸೇವಾಕ್ಷೇತ್ರವಾಗಿರುವ ವೈದ್ಯಕೀಯ ಕ್ಷೇತ್ರವನ್ನೂ ಬಿಟ್ಟಿಲ್ಲ. ಆಸ್ಪತ್ರೆಗಳೆಂದರೆ ಸುಲಿಗೆ ಮಾಡುವ ಕೇಂದ್ರ ಎಂಬ ಅಭಿಪ್ರಾಯ ಕೇಳಿಬರುತ್ತಿದೆ.

ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ (ಐಎಂಒ) ಇತ್ತೀಚೆಗೆ ಪ್ರಕಟಿಸಿದ ವರದಿಯ ಪ್ರಕಾರ ಶೇಕಡಾ 70ರಷ್ಟು ವೈದ್ಯರು ತಮ್ಮ ಕರ್ತವ್ಯದ ಸ್ಥಳದಲ್ಲಿ ಹಿಂಸೆಯನ್ನು ಎದುರಿಸುವ ಪ್ರಸಂಗಗಳು ಬಂದಿವೆಯಂತೆ. ಕೆಲಸದ ಸ್ಥಳಗಳಲ್ಲಿ ತಮ್ಮ ಮೇಲೆ ಹಲ್ಲೆ ನಡೆಸುವವರ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳುವ ಕಾನೂನುಗಳನ್ನು ಜಾರಿಗೆ ತರಬೇಕೆಂಬುದು ವೈದ್ಯರ ಒತ್ತಾಸೆಯಾಗಿದೆ. ಜತೆಗೆ ಆಸ್ಪತ್ರೆಗಳಲ್ಲಿ ತಮಗೆ ಹೆಚ್ಚು ರಕ್ಷಣೆ ಒದಗಿಸುವ ಕಾನೂನುಗಳನ್ನು ರೂಪಿಸಬೇಕೆಂದೂ ಅವರು ಆಗ್ರಹಿಸಿದ್ದಾರೆ. ಈ ಒತ್ತಾಯದ ಹಿನ್ನೆಲೆಯಲ್ಲಿ ಕೆಲವು ರಾಜ್ಯಗಳು ವೈದ್ಯರಿಗೆ ವಿಶೇಷ ರಕ್ಷಣೆ ಒದಗಿಸುವ ಕಾನೂನು ತಿದ್ದುಪಡಿಗಳನ್ನು ಜಾರಿಗೆ ತಂದಿವೆ. ಕೇಂದ್ರ ಸರಕಾರವು ಕೇಂದ್ರೀಕೃತ ಕಾನೂನುಗಳನ್ನು ಜಾರಿಗೊಳಿಸಬೇಕೆಂದು ಈಗ ವೈದ್ಯರು ಒತ್ತಾಯಿಸುತ್ತಿದ್ದಾರೆ.

ಹಿಂದೆಲ್ಲಾ ವೈದ್ಯರು ರೋಗಿಗಳ ಕುಟುಂಬದ ಅವಿಭಾಜ್ಯ ಅಂಗವೇ ಆಗಿದ್ದರು. ವೈದ್ಯಕೀಯ ವೃತ್ತಿಗೆ ಗೌರವವೂ ಇತ್ತು. ವೈದ್ಯರ ಮೇಲೆ ಹೆಚ್ಚುತ್ತಿರುವ ಹಲ್ಲೆಗಳನ್ನು ಗಮನಿಸಿದರೆ ಪರಿಸ್ಥಿತಿ ಈಗ ಹಿಂದಿನಂತಿಲ್ಲ ಎನ್ನುವುದು ಸ್ಪಷ್ಟ. ಸಾಮಾನ್ಯವಾಗಿ ವೈದ್ಯರು ಎಂದ ಮೇಲೆ ಎಲ್ಲ ರೋಗಗಳನ್ನೂ ಗುಣಪಡಿಸಬೇಕು ಎಂದು ರೋಗಿಗಳು, ಅವರ ಸಂಬಂಧಿಕರು ಬಯಸುತ್ತಾರೆ. ಬಹಳಷ್ಟು ಸಂದರ್ಭದಲ್ಲಿ ವೈದ್ಯರು ಹೇಳಿದ್ದೆಲ್ಲಾ ಒಪ್ಪಿ, ಸಾಕಷ್ಟು ಹಣ ಖರ್ಚು ಮಾಡುವ ಅವರು 'ಇಷ್ಟು ಹಣ ಖರ್ಚು ಮಾಡಿಯೂ ವೈದ್ಯರು ರೋಗವನ್ನು ಗುಣಪಡಿಸಲು ಆಗಲಿಲ್ಲವೇಕೆ?' ಎಂದು ಸಿಟ್ಟಿಗೇಳುತ್ತಾರೆ. ವೈದ್ಯರ ನಿರ್ಲಕ್ಷ್ಯವೇ ಅದಕ್ಕೆ ಕಾರಣ ಎಂದು ಅನುಮಾನ ಪಡುತ್ತಾರೆ. ವೈದ್ಯರ ಮೇಲೆ ಹಲ್ಲೆಗಳು ಹೆಚ್ಚಿದ ಬಳಿಕ ಇತ್ತೀಚೆಗೆ ಹೆಚ್ಚು ಅಪಾಯ ಇರುವ ಕ್ಲಿಷ್ಟ ಶಸ್ತ್ರಚಿಕಿತ್ಸೆಗಳನ್ನು ಕೈಗೆತ್ತಿಕೊಳ್ಳಲು ವೈದ್ಯರು ಹಿಂಜರಿಯುವ ಪ್ರಕರಣಗಳೂ ವರದಿಯಾಗುತ್ತಿವೆ. ತುರ್ತು ಸಂದರ್ಭಗಳಲ್ಲಿ ತಮ್ಮ ಆಸ್ಪತ್ರೆಗೆ ಬಂದ ರೋಗಿಗಳನ್ನು ಯಾವುದೇ ಅಪಾಯ ಎದುರಿಸಲು ಬಯಸದೆ ದೊಡ್ಡಾಸ್ಪತ್ರೆಗೆ ಅಥವಾ ವಿಶೇಷ ಆಸ್ಪತ್ರೆಗೆ ಹೊತ್ತುಹಾಕುವ ವೈದ್ಯರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ರೋಗಿಗಳಿಗೇ ಕಷ್ಟ– ನಷ್ಟ. ತುರ್ತು ಸಂಧರ್ಭಗಳಲ್ಲಿ ಪ್ರಾಣ ಉಳಿಸಬಹುದಾದ ವೈದ್ಯರ ತಜ್ಞಸೇವೆ ದೊರಕದೆ ರೋಗಿ ಪ್ರಾಣ ಕಳೆದುಕೊಳ್ಳುವ ಪರಿಸ್ಥಿತಿ ಬಂದೊದಗುತ್ತದೆ.

ಐಎಂಒ ಇತ್ತೀಚೆಗೆ ನಡೆಸಿದ ಜನಮತ ಸಂಗ್ರಹದಲ್ಲಿ ತಿಳಿದುಬಂದಿರುವ ಕೆಲವು ಮಾಹಿತಿಗಳು ವೈದ್ಯರು ಮತ್ತು ರೋಗಿಗಳ ನಡುವಣ ಅಪನಂಬಿಕೆ ಹೆಚ್ಚುತ್ತಿರುವುದರ ಬಗ್ಗೆ ಬೆಳಕು ಚೆಲ್ಲಿವೆ. ಸುಮಾರು ಒಂದು ಸಾವಿರ ರೋಗಿಗಳನ್ನು ಈ ಜನಮತ ಸಂಗ್ರಹದಲ್ಲಿ ಸಂದರ್ಶಿಸಿದಾಗ, ಶೇಕಡಾ 90ರಷ್ಟು ಮಂದಿ ರೋಗಿಗಳು 'ವೈದ್ಯರು ತಮ್ಮ ಮಾತುಗಳನ್ನು ಸರಿಯಾಗಿ ಆಲಿಸುವುದಿಲ್ಲ' ಎಂದು ದೂರಿದರು! ಶೇಕಡಾ 85 ರಷ್ಟು ರೋಗಿಗಳ ಪ್ರಕಾರ, ವೈದ್ಯರು ತಾವು ನೀಡುವ ಚಿಕಿತ್ಸೆ, ಅದರ ವಿಧಾನ ಮತ್ತು ಅದು ಒಳಗೊಂಡಿರುವ ಅಪಾಯದ ಬಗ್ಗೆ ಸ್ಪಷ್ಟ ಮಾಹಿತಿ ನೀಡುವುದಿಲ್ಲ!

ಇಂತಹ ಸಂದರ್ಭಗಳನ್ನು ಎದುರಿಸುವುದು ಹೇಗೆ ಎನ್ನುವ ಬಗ್ಗೆ ವೈದ್ಯಸಮೂಹ ಆತ್ಮವಿಮರ್ಶೆ ಮಾಡಿಕೊಳ್ಳಬೇಕಿದೆ. ಚಿಕಿತ್ಸೆಯಲ್ಲಿ ವೈದ್ಯರ ಮೇಲಿನ ರೋಗಿಯ ನಂಬಿಕೆಯೂ ಮುಖ್ಯ ಪಾತ್ರ ವಹಿಸುತ್ತದೆ ಎನ್ನುವುದು ಸಂಶೋಧನೆಗಳಿಂದ ದೃಢಪಟ್ಟಿದೆ. ವೈದ್ಯರು ಮೊದಲ ಭೇಟಿಗೇ ತಮ್ಮ ಮಾತುಗಳನ್ನು ಗಮನವಿಟ್ಟು ಗಂಭೀರವಾಗಿ ಆಲಿಸುತ್ತಿಲ್ಲ ಎನ್ನುವ ಭಾವನೆ ಬಂದರೆ ಆ ರೋಗಿಯ ಚಿಕಿತ್ಸೆ ಫಲಕಾರಿಯಾಗುವುದು ಕಷ್ಟವೇ. ವೈದ್ಯಕೀಯ ವಿದ್ಯಾಭ್ಯಾಸದಲ್ಲಿ ರೋಗಿಗಳ ಹಕ್ಕುಗಳು ಮತ್ತು ವೈದ್ಯರ ಸಂವಹನ ಕೌಶಲದ ಕುರಿತು ಪಠ್ಯಗಳನ್ನು ಅಳವಡಿಸಬೇಕು ಎಂದು ಈಗಾಗಲೇ ಐಎಂಒ ಸೂಚಿಸಿದೆ. ಆದರೆ ಅಷ್ಟರಿಂದಲೇ ಸಮಸ್ಯೆ ಪರಿಹಾರ ಆಗುವಂತೆ ಕಾಣುತ್ತಿಲ್ಲ.

ವೈದ್ಯಶಿಕ್ಷಣದ ಖಾಸಗೀಕರಣದಿಂದಾಗಿ ವೈದ್ಯರ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎನ್ನುವುದು ನಿಜ. ಆದರೆ ಗುಣಮಟ್ಟ ಏರಿಕೆಯಾಗಿಲ್ಲ ಎನ್ನುವುದನ್ನೂ ಗಮನಿಸಬೇಕು. ಭ್ರಷ್ಟಾಚಾರ ಸೇವಾಕ್ಷೇತ್ರವಾಗಿರುವ ವೈದ್ಯಕೀಯ ಕ್ಷೇತ್ರವನ್ನೂ ಬಿಟ್ಟಿಲ್ಲ. ಆಸ್ಪತ್ರೆಗಳೆಂದರೆ ಸುಲಿಗೆ ಮಾಡುವ ಕೇಂದ್ರ ಎಂಬ ಅಭಿಪ್ರಾಯ ಕೇಳಿಬರುತ್ತಿದೆ. ದುಬಾರಿ ಶಿಕ್ಷಣ, ಸೂಕ್ತ ತರಬೇತಿಯಿಲ್ಲದ ಸಿಬ್ಬಂದಿ, ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಭ್ರಷ್ಟತೆ, ದುಬಾರಿ ಹಾಗೂ ಕಳಪೆ ಔಷಧಿ– ಮುಂತಾಗಿ ವೈದ್ಯರು ಮತ್ತು ರೋಗಿಗಳು ನಡುವಣ ಅಪನಂಬಿಕೆ ಹೆಚ್ಚಲು ಕಾರಣ. ಸ್ಪೆಶಾಲಿಟಿ ಆಸ್ಪತ್ರೆಗಳಲ್ಲಂತೂ ತಜ್ಞ ವೈದ್ಯರು ರೋಗಿಗೆ ಅಗತ್ಯವೇ ಇಲ್ಲದ ಎಷ್ಟೋ ಚಿಕಿತ್ಸೆಗಳನ್ನು ಶಿಫಾರಸು ಮಾಡುತ್ತಾರೆ. ತನ್ಮೂಲಕ ರೋಗಿಯ ವೈದ್ಯಕೀಯ ವೆಚ್ಚ ಏರಬೇಕು ಎನ್ನುವುದಷ್ಟೇ ಅವರ ಗುರಿಯಾಗಿರುತ್ತದೆ. ಇಂತಹ ಪ್ರಕರಣಗಳನ್ನು ಕಣ್ಣಾರೆ ಕಾಣುವ ಜನರಲ್ಲಿ ವೈದ್ಯಕೀಯ ವ್ಯವಸ್ಥೆಯ ಬಗ್ಗೆಯೇ ಅಪನಂಬಿಕೆ ಬೆಳೆಯುವುದು ಅಸಹಜವಲ್ಲ.

ವೈದ್ಯರ ಮೇಲೆ ಕೆಲಸದ ಸ್ಥಳಗಳಲ್ಲಿ ನಡೆಯುವ ಹಲ್ಲೆಗಳನ್ನು ಸಮರ್ಥಿಸಲಾಗದು. ಆದರೆ ಅದಕ್ಕೆ ಕೇವಲ ರೋಗಿಗಳ ಸಂಬಂಧಿಕರನ್ನು ಮಾತ್ರ ದೂರಿ ಪ್ರಯೋಜನವಿಲ್ಲ. ವೈದ್ಯವ್ಯವಸ್ಥೆಯಲ್ಲಿ ಇರುವ ಲೋಪಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯನ್ನು ವೈದ್ಯಸಂಘಟನೆಗಳೇ ಇಡಬೇಕಿದೆ.

■ ಬಿ.ಎಂ.ಹನೀಫ್



ಶಿಲ್ಪಾ ಕಬ್ಬಿಣಕಂತಿ